ಒ ಎಸ್ 48/2014 ಡಿ.ಡಬ್ಲ್ಯೂ:2

ಇಂದು ದಿಃ 04.04.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

ಚಿಕ್ಕತಾಯಮ್ಮ ಯಾರು ಎಂದು ಗೊತ್ತಿಲ್ಲ. ನಾನು ರಂಗಯ್ಯನವರ ಮಗ ಎಂದು ತೋರಿಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ನಾನು ದಿನಾಂಕ 22.03.1977ರಂದು ಜನಿಸಿರುತ್ತೇನೆ. ಆ ಸಂಬಂಧವಾಗಿ 1970 ಹಾಗೂ 1975ರ ದಾಖಲೆಗಳ ಬಗ್ಗೆ ಖುದ್ದಾಗಿ ಗೊತ್ತಿಲ್ಲ. 1982ರಲ್ಲಿ ರಂಗಯ್ಯ ಆಸ್ತಿ ಖರೀದಿಸಿದ್ದರು ಎಂಬ ಬಗ್ಗೆ ಖುದ್ದಾಗಿ ನನಗೆ ಮಾಹಿತಿ ಗೊತ್ತಿಲ್ಲ. ಮೊಳ್ಳಯ್ಯ ಮತ್ತು ಮಾದಮ್ಮರವರಿಗೆ ಮಕ್ಕಳು ಇಲ್ಲ ಎಂದು ನಾನು ಖುದ್ದಾಗಿ ತಿಳಿದುಕೊಂಡಿಲ್ಲ. ವಾದಿಗಳು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲನೆ ಮಾಡಿದ್ದೇನೆ. ನಿಪಿ 19 ಮತ್ತು 20 ರ ಕಲಂ 9ರಲ್ಲಿ ಮಾದಮ್ಮ ಬಿನ್ ಬುಂಡಯ್ಯ ಎಂದು ಬರೆಯಲಾಗಿದೆ. ನಿಪಿ 27 ರಿಂದ 29ರ ಕಲಂ 9ರಲ್ಲೂ ಸಹ ಮಾದಮ್ಮ ಬಿನ್ ಬುಂಡಯ್ಯ ಎಂದು ಬರೆಯಲಾಗಿದೆ. ನಂತರದ ದಾಖಲೆಗಳಲ್ಲಿ ಮಾದಮ್ಮ ಕೋಂ ಬುಂಡಯ್ಯ ಎಂದು ನಮೂದಾಗಿದೆ ಎಂದರೆ ಸರಿ. ಅದು ಕೈ ಬರವಣಿಗೆಯಿಂದ ಆದ ತಪ್ಪು ಎಂದರೆ ಸರಿ. ಮಾದಮ್ಮ ಬುಂಡಯ್ಯನ ಮಗಳು ಎಂದರೆ ಸರಿ. 1982ರಲ್ಲಿ ಮಾದಮ್ಮರವರು ರಂಗಯ್ಯನಿಗೆ ಐಟಂ ನಂ3 ಅನ್ನು ಮಾರಾಟ ಮಾಡಿದ್ದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಮಾದಮ್ಮನವರಿಗೆ 1994 ರಲ್ಲಿ ಕೊಟ್ಟಿದ್ದೆವು ಎನ್ನುವ ನೋಟೀಸ್ ಅನ್ನು ನ್ಯಾಯಾಲಯಕ್ಕೆ ಕೊಟ್ಟ ಬಗ್ಗೆ ಗೊತ್ತಿಲ್ಲ. ಆ ವಿಚಾರವೇ ನನಗೆ ಗೊತ್ತಿಲ್ಲ. 2008ರಲ್ಲಿ ಸರ್ವೆ ಆದಾಗ ನಾನು ಇದ್ದೆ. ಆರ್ ಟಿ ಸಿ ದಾರರು ಮತ್ತು ಅನುಭವದಾರರ ಸಮಕ್ಷಮ ಮಹಜರ್ ಮಾಡಿ ಕ್ರಮ ತೆಗೆದುಕೊಳ್ಳಬೇಕೆಂದು ಷರಾ ಬರೆದ ಬಗ್ಗೆ ನನಗೆ ಗೊತ್ತಿಲ್ಲ.

ವಾದಿಗಳ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದರು. ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ನಂಜನಗೂಡು.